ಎಸ್.ಸಿ. ಸಂಃ10042/2021
ಪಿಡಬ್ಲ್ಯೂ- 1

ಪ್ರಮಾಣ ವಚನ ಭೋದಿಸಿದ ದಿನಾಂಕಃ 21-12-2023

<u>ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ</u>

ಪೋಲೀಸರು ಸ್ಥಳದಲ್ಲಿ ಮಹಜರ್ ನ್ನು ಯಾವ ದಿನಾಂಕದಂದು ಮಾಡಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಪೋಲೀಸರು ಮಹಜರ್ ಗೆ ಬರಬೇಕು ಎಂದು ನನಗೆ ಯಾವುದೇ ನೋಟೀಸ್ ಕೊಟ್ಟಿಲ್ಲ. ಚಾಸಾ-3 ಮತ್ತು ಚಾಸಾ4 ನಮ್ಮ ಊರಿನವರು. ಚಾಸಾ-3 ಮತ್ತು ಚಾಸಾ4 ರವರ ಜಮೀನು ನನ್ನ ಜಮೀನಿನ ಅಕ್ಕಪಕ್ಕದಲ್ಲಿ ಇಲ್ಲ ಎಂದರೆ ಸ್ವಲ್ಪ ದೂರದಲ್ಲಿ ಇವೆ. ಪೋಲೀಸರು ಮಹಜರ್ ಮಾಡಲು ಬಂದಿರುವ ವಿಷಯವನ್ನು ನಮ್ಮ ಊರಿನ ಜನರು ತಿಳಿಸಿರುತ್ತಾರೆ. ಸದರಿ ಜನರ ಹೆಸರು ಗೊತ್ತಿಲ್ಲ, ಅವರು ಬೇರೆ ಊರಿನವರು. ಘಟನಾ ಸ್ಥಳಕ್ಕೆ ಹೋದಾಗ ಪೋಲೀಸರು ನಮ್ಮ ಅಕ್ಕಪಕ್ಕದ ಜಮೀನಿನವರನ್ನು ಕರೆದರೋ ಇಲ್ಲವೋ ಗೊತ್ತಿಲ್ಲ. ಆ ಸಮಯದಲ್ಲಿ ಜನ ಸೇರಿದ್ದರು. ನಾನು ಹೋಗುವ ಮೊದಲು ಪೋಲಿಸೇರು ಮತ್ತು ಜನರು

ಎಷ್ಟು ಸಮಯದಿಂದ ಸ್ಥಳದಲ್ಲಿ ಇದ್ದರು ಎಂದು ಗೊತ್ತಿಲ್ಲ. ನಾನು ಹೋಗುವ ಮೊದಲು ಪೋಲೀಸರು ಏನು ಬರವಣಿಗೆ ಮಾಡಿದರು, ಯಾರು ಹೇಳಿಕೆಗಳನ್ನು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ಮಹಜರ್ ಗೆ ಸಹಿ ಮಾಡಲು ಹೇಳಿದ್ದು ನಾನು ಸಹಿ ಮಾಡಿರುತ್ತೇನೆ. ಸ್ಥಳದಲ್ಲಿ ಸುಮಾರು 4 ರಿಂದ 5 ಜನ ಇದ್ದರು ನಂತರ ಸುಮಾರು ಜನ ಬಂದಿದ್ದರು. ಸದರಿ 4-5 ಜನ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಜನರ ಸಹಿಗಳನ್ನು ಪೋಲೀಸರು ತೆಗೆದುಕೊಂಡಿಲ್ಲ.

ಪೋಲೀಸರಿಗೆ ಜಾಗವನ್ನು ಚಾಸಾ-3 ಮತ್ತು ಚಾಸಾ-4 ರವರು ತೋರಿಸಿರುತ್ತಾರೆ. ಮಹಜರ್ ಸಮಯದಲ್ಲಿ ಸ್ಥಳದಲ್ಲಿ ಯಾವುದೇ ಟ್ರಾಕ್ಟರ್ ಇರಲಿಲ್ಲ. ಪೋಲೀಸರು ಸ್ಥಳದಲ್ಲಿ ಟ್ರಾಕ್ಟರ್ ವಿಷಯ ನನ್ನನ್ನು ಏನು ಕೇಳಿರುವುದಿಲ್ಲ. ಟ್ರಾಕ್ಟರ್ ಯಾರು ಚಾಲನೆ ಮಾಡುತ್ತಿದ್ದರು ಅದರ ಮಾಲೀಕರು ಯಾರು ಎಂದು ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಪೋಲೀಸರು ಪಡೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮಹಜರ್ ಗೆ ಯಾರು ಯಾರು ಸಹಿ ಮಾಡಿದರು ಎಂದು ನನಗೆ ಗೊತ್ತಿಲ್ಲ.

ಟ್ರಾಕ್ಟರ್ ನಲ್ಲಿ ಚಾಲಕನ ಸೀಟ್ ಸುಮಾರು 5-6 ಅಡಿ ಎತ್ತರ ಇರುತ್ತದೆ ಎಂದರೆ ಇರಬಹುದು. ಚಾಲಕನ ಸೀಟಿನ ಪಕ್ಕದಲ್ಲಿ ಯಾರಾದರೂ ಕೂರಬೇಕಾದರೆ ಮಡ್ಗಾರ್ಡ್ ಮೇಲೆ ಕೂರುತ್ತಾರೆ ಎಂದರೆ ಸರಿಯಲ್ಲ. ಆದರೆ ಸೀಟಿನ ಪಕ್ಕ ಒಂದು ಹಿಡಿಕೆ ಇದೆ ಎಂದರೆ ಹೌದು. ಸದರಿ ಹಿಡಿಕೆ ಜನ ಕೂತುಕೊಂಡು ಹಿಡಿಯಲು ಇರುತ್ತದೆ ಎಂದರೆ ಸರಿಯಲ್ಲ. ಟ್ರಾಕ್ಟರ್ ಮತ್ತು ಟ್ರೇಲರ್ ಗೆ ಮಧ್ಯದಲ್ಲಿ 3 ರಿಂದ 4 ಅಡಿ ಗ್ಯಾಪ್ಇರುತ್ತದೆ ಎಂದರೆ ಹೌದು. ಟ್ರೇಲರ್ ನ ಕೊಕ್ಕೆ ಟ್ರಾಕ್ಟರ್ ಗೆ ಸೇರಿರುತ್ತದೆ ಎಂದರೆ ಹೌದು.

ಟ್ರಾಕ್ಟರ್ ಸ್ಕಿಡ್ ಆದಾಗ ಅಥವಾ ಲೋಡ್ ಆಗಿ ಸ್ಕಿಡ್ ಆದಾಗ ಮುಂಬದಿ ಟ್ರೈಲರ್ ಮೇಲೆ ಏಳುತ್ತದೆ ಎಂದರೆ ನನಗೆ ಗೊತ್ತಿಲ್ಲ. ಟ್ರಾಕ್ಟರ್ ಪಲ್ಟಿ ಆದಾರ ಟ್ರಾಕ್ಟರ್ ಚಾಲಕ ಟ್ರೈಲರ್ ಹಾಗೂ ಟ್ರೆಲರ್ ನಡುವೆ ಇರುವ ಸಂಧಿಯಲ್ಲಿ ಬೀಳುವ ಸಾಧ್ಯತೆ ಇದೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನನಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ನನ್ನ ಮಗನ ತಲೆಯ ಎಡಭಾಗದಲ್ಲಿ ಪೆಟ್ಟು ಬಿದ್ದಿರುತ್ತದೆ. ಟ್ರಾಕ್ಟರ್ ಪಲ್ಟಿಯಾದಾಗ ಅದರ ಚಾಲಕ ಬಿದ್ದಾಗ ತಲೆಗೆ ಪೆಟ್ಟಾಗುವ ಸಾಧ್ಯತೆ ಇರುತ್ತದೆ ಎಂದರೆ ನಾನು ಟ್ರಾಕ್ಟರ್ ಬಿದ್ದಿದ್ದನ್ನು ನೋಡಿಲ್ಲ.

ಆರೋಪಿ ದೊಣ್ಣೆ ಹಿಡಿದುಕೊಂಡು ದೂರದಿಂದ ಕೂಗಿಕೊಂಡು ಬರುತ್ತಿದ್ದಾಗ ನಾನು ಆರೋಪಿಯನ್ನು ತಡೆಯುವ ಪ್ರಯತ್ನ ಮಾಡಿರುತ್ತೇನೆ. ಟ್ರಾಕ್ಟರ್ ನಿಂದ ಇಳಿದು ಒಂದೆರಡು ಅಡಿ ದೂರದಿಂದ ತಡೆದಿರುತ್ತೇನೆ. ಆ ಸಮಯದಲ್ಲಿ ಆರೋಪಿ ಮತ್ತು ಆತನ ಕೈಯ್ಯಲ್ಲಿದ್ದ ದೊಣ್ಣೆಯನ್ನು ಹಿಡಿಯಲು ಪ್ರಯತ್ನಪಡಲು ಆರೋಪಿ ಅವಕಾಶ ಕೊಟ್ಟಿಲ್ಲ. ಮು ಮಾ 1 ನ್ನು ನಾನು ಹಿಡಿದುಕೊಳ್ಳಲು ಪ್ರಯತ್ನಪಟ್ಟೆ ಆದರೆ ಆಗಲಿಲ್ಲ.
(ಆರೋಪಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).